O.S. 4/2018

P.W.1

<u>ಸಾಕ್ಷಿಯನ್ನು ದಿನಾಂಕಃ **16-12-2019** ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ವಕೀಲರಾದ ಶ್ರೀ ಕೆ ಎಸ್ ಎಂ ರವರಿಂದಃ</u>

ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ವಿಷಯಗಳೆಲ್ಲವು ಸತ್ಯವಾಗಿರುತ್ತದೆ.

ನಾನು ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ದಿಃ 19-03-2004 ರಂದು ಆಗಿರುವ ಎರಡು ನೋಂದಾಯಿತ ಕ್ರಯ ಪತ್ರಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 1 ಮತ್ತು 2 ಎಂದು, ದಿಃ 23-04-2009 ರಂದು ನೋಂದಾಯಿತ ದಾನ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು, ದಿಃ 07-04-2004 ರ ನಡುವಳಿಕೆಯ ಪ್ರತಿಯನ್ನು ನಿಪಿ 4 ಎಂದು, ದಿಃ 19-05-2004 ರ ನಡವಳಿಕೆಯ ಪ್ರತಿಯನ್ನು ನಿಪಿ 5 ಎಂದು, ದಿಃ 25-05-2009 ರಲ್ಲಿ ಹಕ್ಕು ವರ್ಗಾವಣೆ ಮಾಡಿದ ಬಗ್ಗೆ ಹಿಂಬರಹವನ್ನು ನಿಪಿ 6 ಎಂದು, 2016-17 ನೇ ಸಾಲಿನ ಕಟ್ಟಡ ಆಸ್ತಿ ತೆರಿಗೆ ಸ್ವಯಂ ನಿರ್ಧರಣಾ ನಮೂನೆ ಮತ್ತು ತೆರಿಗೆ ಪಾವತಿ ಮಾಡಿದ ಬಗ್ಗೆ ಚಲನ್ ಪ್ರತಿಗಳನ್ನು ಹಾಜುರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 7 ಮತ್ತು 8 ಎಂದು, 2015-16 ನೇ ಸಾಲಿನ ಕಟ್ಟಡ ಆಸ್ತಿ ತೆರಿಗೆ ಸ್ವಯಂ ನಿರ್ಧರಣಾ ನಮೂನೆ ಮತ್ತು ತೆರಿಗೆ ಪಾವತಿ ಮಾಡಿದ ಬಗ್ಗೆ ಚಲನ ಪ್ರತಿಗಳನ್ನು ಹಾಜುರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ9 ಮತ್ತು 10 ಎಂದು, ತೆರಿಗೆ ಪಾವತಿ ರಶೀದಿಯನ್ನು ನಿಪಿ 11 ಎಂದು, 2017-18 ನೇ ಸಾಲಿನ ಆಸ್ತಿ ತೆರಿಗೆ ಸ್ವಯಂ ನಿರ್ಧರಣಾ ನಮೂನೆ ಪ್ರತಿಯನ್ನು ನಿಪಿ 12 ಎಂದು, 2014-15 ನೇ ಸಾಲಿನ ಎರಡು ಖಾತಾ ಎಕ್ಸಾಟ್ರಾಕ್ಟ್ ನ ದೃಡೀಕೃತ ನಕಲಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 13 ಮತ್ತು 14 ಎಂದು, ದಿಃ 11-02-2010 ರಂದು ಪುರಸಭೆ ಅಧಿಕಾರಿಗಳು ನೀಡಿರುವ ಕಟ್ಟಡ ಪರವಾನಿಗೆ ಪತ್ರ ನಿಪಿ 15 ಎಂದು, ಕಟ್ಟಡ ಯೋಜನೆಯನ್ನು ಅನುಮೋದಿಸಿರುವ ಬಗ್ಗೆ ನಕ್ಷೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 16 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ

**ಸಾಕ್ಷಿಯ ಪಾಟೀಸವಾಲಿಗಾಗಿ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು**.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**